## ಅಧ್ಯಾಯ 1 ಅಭ್ಯಾಸದ ಹಾಳೆ

# ಪಾಪದ ಮತ್ತು ಮರಣದ ಮೂಲವು ಯಾವುದು?

I. ಸೃಷ್ಟಿಯಲ್ಲಿ ಯಾವುದು ಒಳಗೊಂಡಿತ್ತು?

1. ದೇವರು ________ , ________ ಉಂಟುಮಾಡಿದನು. ಆದಿಕಾಂಡ 1:1
2. ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ________ . ಆದಿಕಾಂಡ 1:31

II. ಏದೆನ್ ತೋಟದ ಮಧ್ಯದಲ್ಲಿ ಯಾವುದು ಇತ್ತು?

1. ಆ ವನ ಮಧ್ಯದಲ್ಲಿ ________ ವೃಕ್ಷವನ್ನೂ, ________ , ________ ವೃಕ್ಷವನ್ನೂ ಬೆಳೆಯಿಸಿದನು. ಆದಿಕಾಂಡ 2:9
2. ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು, ________ ಎಂದು ವಿಧಿಸಿದನು. ಆದಿಕಾಂಡ 2:17

III. ಏದೆನ್ ತೋಟದಲ್ಲಿ ಹವ್ವಳು ಹೇಗೆ ಶೋಧಿಸಲ್ಪಟ್ಟಳು?

1. ಸರ್ಪವು ಹೇಳಿತು, "ನೀವು ತೋಟದಲ್ಲಿಯ ಪ್ರತಿಯೊಂದು ಮರದ ________ ಬಾರದೆಂದು ದೇವರು ಹೇಳಿರುವನೋ?" ಆದಿಕಾಂಡ 3:1
2. ಹವ್ವಳು ತಾನು ತಿಂದರೆ ತಾನು ________ ಎಂದು ದೇವರು ಹೇಳಿದ್ದನ್ನು ತಿಳಿದಿದ್ದಳು. ಆದಿಕಾಂಡ 3:3
3. ಸರ್ಪವು ಹೇಳಿತು: ಎ. ________________________ ಆದಿಕಾಂಡ 3:4
   ಬಿ. ________________________ ಆದಿಕಾಂಡ 3:5
   ಸಿ. ________________________ ಆದಿಕಾಂಡ 3:5
4. ಹವ್ವಳು ಹಣ್ಣು ಹೇಗಿತ್ತೆಂದು ನೋಡಿದಳು: ಎ. ________ ಆದಿಕಾಂಡ 3:6
   ಬಿ. ________ ಆದಿಕಾಂಡ 3:6
   ಸಿ. ________ ಆದಿಕಾಂಡ 3:6

IV. ಒಳ್ಳೆಯದರ ಮತ್ತು ಕೆಟ್ಟದ್ದರ ಅರುಹನ್ನುಂಟು ಮಾಡುವ ಮರದ ಹಣ್ಣನ್ನು ತಿಂದದ್ದರ ಪರಿಣಾಮವು ಏನಾಯಿತು?

1. ಅವರಿಬ್ಬರ ಕಣ್ಣುಗಳು ________ . ಆದಿಕಾಂಡ 3:7
2. ಸರ್ಪವು ತನ್ನ ________ ಹೋಗುವುದು. ಆದಿಕಾಂಡ 3:14
3. ಸ್ತ್ರೀಗೆ ಹೆರಿಗೆಯ ಕಾಲದಲ್ಲಿ ಬಹಳ ________ ಇರುವುದು ಮತ್ತು ಗಂಡನು ಆಕೆಯ ಮೇಲೆ ________ ಇರುವನು. ಆದಿಕಾಂಡ 3:16
4. ಭೂಮಿಗೆ ________ ಬಂತು ಆದಿಕಾಂಡ 3:17, ಮತ್ತು ಮನುಷ್ಯನು ಪುನಃ ________ ಸೇರುವನು. ಆದಿಕಾಂಡ 3:19.
5. "ಮನುಷ್ಯನು ________ ಮತ್ತು ________ ಅರಿತು, ________ ಒಬ್ಬನಂತಾದನು." ಎಂದು ದೇವರು ಹೇಳಿದನು. ಆದಿಕಾಂಡ 3:22


V. ಒಳ್ಳೆಯದನ್ನು ಮತ್ತು ಕೆಟ್ಟದ್ದನ್ನು ತಿಳಿದುಕೊಂಡು ಮಕ್ಕಳು ಲೋಕದಲ್ಲಿ ಜನಿಸುವರೋ?

1. ಮಕ್ಕಳಿಗೆ ಒಳ್ಳೆಯದರ ಮತ್ತು ಕೆಟ್ಟದ್ದರ ಅರಿವು ________ ಧರ್ಮೋಪದೇಶ. ಧರ್ಮೋಪದೇಶಕಾಂಡ 1:39
2. ಮಕ್ಕಳಿಗೆ ಕೆಟ್ಟದ್ದು ________ , ಒಳ್ಳೆಯದು ________ ಎಂಬುದು ತಿಳಿದಿರುವದಿಲ್ಲ. ಯೆಶಾಯ 7:16
3. ಒಬ್ಬನು ಕುರುಡನಾಗಿದ್ದರೆ, ಅವನಿಗೆ ________ ಇರುತ್ತಿರಲಿಲ್ಲ. ಯೋಹಾನ 9:41

VI. ಮಕ್ಕಳು ಪಾಪಿಗಳಾಗಿ ಹುಟ್ಟುವರೋ ಮತ್ತು ಪರಲೋಕ ರಾಜ್ಯದಿಂದ ಹೋರಗಿಡಲ್ಪಡುವರೋ?

1. ________ ಯ ಪಾಪವನ್ನು ಮಗನು ಹೊತ್ತುಕೊಳ್ಳುವದಿಲ್ಲ. ಯೋಹೆಜ್ಕೆಲ 18:20
2. ದೇವರು ಮನುಷ್ಯನೊಳಗೆ, ಸೃಷ್ಟಿಸುವನು ಜೆಕರ್ಯ 12:1, ಮತ್ತು ನಮ್ಮ ಆತ್ಮಗಳಿಗೆ ________ ಆಗಿರುವನು. ಇಬ್ರಿಯ 12:9 (ಪ್ರಸಂಗಿ 12:7 ಸಹ ನೋಡಿರಿ)
3. ಪರಲೋಕ ರಾಜ್ಯವು ________ . ಮತ್ತಾಯ 19:14

Copyright 1992 - Gospel Light Pub. Co., Delight, AR 71940




ಕಣ್ಣುಗಳು ತೆರೆಯಲ್ಪಟ್ಟವು
ದೇವರಂತೆ - ಒಳ್ಳೆಯದನ್ನು ಕೆಟ್ಟದ್ದನ್ನು ತಿಳಿ

ಮಕ್ಕಳು ಪಾಪಿಗಳಾಗಿದ್ದಾರೆ, ಕಾರಣ:
1. ಸ್ವಂತ ಕೃತ್ಯಗಳು? ಇಲ್ಲ
2. ತಂದೆತಾಯಿಗಳು ದೇಹದ ಮುಖಾಂತರ? ಇಲ್ಲ
3. ದೇವರು, ಆತ್ಮನ ಮುಖಾಂತರ? ಇಲ್ಲ

**ಅಧ್ಯಯನ ಪ್ರಶ್ನಾವಳಿಯನ್ನು ಪ್ರಸ್ತುತ ಪಡಿಸುವುದು:**

## 1

# "ಪಾಪದ ಮತ್ತು ಮರಣದ ಮೂಲವು ಯಾವುದು?"

"ಪಾಪದ ಮತ್ತು ಮರಣದ ಮೂಲವು ಯಾವುದು?" ಎಂಬ ಅಧ್ಯಯನದ ಉತ್ತಮ ಪ್ರಾರಂಭವಾಗಿರುವುದು ಯಾಕಂದರೆ ಮುಂದಿನ ಅಧ್ಯಯನಗಳಿಗಾಗಿ ಇದನ್ನು ನೆಲೆಗಟ್ಟನ್ನಾಗಿ ಹಾಕಲು ಉಪಯೋಗಿಸಬಹುದು.

**ಉದ್ದೇಶ**

ಈ ಪಾಠದ ಉದ್ದೇಶವು ಆದಾಮ ಮತ್ತು ಹವ್ವರ ಪಾಪದ ಪರಿಣಾಮವಾಗಿ "ಪಾಪ ಮತ್ತು ದೈಹಿಕ ಮರಣ" ಲೋಕವನ್ನು *ಪ್ರವೇಶಿಸಿದ್ದಾಗ್ಯೂ,* ಅವರ ಪಾಪದ *ಅಪರಾಧವು* ಅವರ ನಂತರದ ಸಂತತಿಗಳವರೊಂದಿಗೆ ಹಂಚಿಕೊಳ್ಳಲ್ಪಡಲಿಲ್ಲ ಎಂಬುದನ್ನು ತೋರಿಸುವುದಾಗಿದೆ. ದೇವರ ಉತ್ತಮ ಸೃಷ್ಟಿಯು ಆದಾಮ ಮತ್ತು ಹವ್ವರ ಪಾಪದಿಂದ ಕೆಟ್ಟು ಹೋದದ್ದಾಯಿತು.

**ಸಂಕ್ಷಿಪ್ತದಲ್ಲಿ ಪಾಠ**

ದೇವರು ಪ್ರತಿಯೊಂದನ್ನು ಒಳ್ಳೇಯದಾಗಿ ಸೃಷ್ಟಿಸಿದನು, ಆದರೆ ಪಾಪದ ಕಾರಣದಿಂದ ತನ್ನ ಉತ್ತಮ ಸೃಷ್ಟಿಯ ಮೇಲೆ ದೇವರು ಶಾಪಹಾಕಿದನು. ಆದಾಮ ಮತ್ತು ಹವ್ವರ ಪಾಪದ ಕಾರಣದಿಂದ ಪಾಪವೂ ಒಳ್ಳೇದರ ಮತ್ತು ಕೆಟ್ಟದ್ದರ ಅರುಹೂ ಲೋಕವನ್ನು ಪ್ರವೇಶಿಸಿದವು. ಶಿಶುಗಳು ಆದಾಮನ ಮತ್ತು ಹವ್ವಳ ಪಾಪದ ಫಲಿತಾಂಶದಿಂದ ಪರಿಣಾಮ ಹೊಂದಿದವು ಆದರೆ ಆದಾಮ ಮತ್ತು ಹವ್ವರ ಪಾಪದ ಅಪರಾಧವನ್ನು ಹೊತ್ತುಕೊಂಡು ಜನಿಸಿರುವದಿಲ್ಲ ಎಂದು ಈ ಪಾಠವು ತೋರಿಸುತ್ತದೆ ಎಂದು ಸಂಕ್ಷೇಪವಾಗಿ ಹೇಳಬಹುದು.

**ಪೀಠಿಕೆ**

[ಈ ಪಾಠಕ್ಕಾಗಿ ಕಲಿಯುವವನನ್ನು ಸಿದ್ಧಪಡಿಸುವಲ್ಲಿ, ಶಿಕ್ಷಕನು ಅವನು ಬೈಬಲಿನೊಂದಿಗೆ ಎಷ್ಟು ಪರಿಚಿತನಾಗಿರುವನು ಎಂಬುದನ್ನು ತಿಳಿದುಕೊಳ್ಳತಕ್ಕದ್ದು. ಒಳ್ಳೇ ಪ್ರಾರಂಭವು ಈ ಕೆಳಗಿನಂತಿರಬಹುದು (ಕೆಳಗಿನ ವಿಷಯವು ಶಿಕ್ಷಕನು ಒಂದು ಪಾಠವನ್ನು ಪ್ರಸ್ತುತಪಡಿಸುವಂತೆ ಅವನು ಹೇಳುವದರ ಪದ ಪದದ ಹೇಳಿಕೆಯಾಗಿದೆ):]

ನಿಮ್ಮ ಬುದ್ಧಿವಂತಿಕೆಯನ್ನು ಅಪಮಾನಪಡಿಸಲು ನಾನು ಬಯಸುವದಿಲ್ಲ, ಆದರೆ ಬೈಬಲಿನ ಸ್ವಭಾವ ಮತ್ತು ರಚನೆಯ ಬಗ್ಗೆ ತಿಳುವಳಿಕೆಯಲ್ಲಿ ನೀವು ಎಲ್ಲಿ ಇರುವಿರಿ

ಎಂಬುದನ್ನು ತಿಳಿದುಕೊಳ್ಳಲಿಕ್ಕಾಗುವಂತೆ ಅತೀ ಸರಳವಾದ ಮಟ್ಟದಲ್ಲಿ ಪ್ರಾರಂಭಿಸಲು ಬಯಸುತ್ತೇನೆ. ಬೈಬಲು ಎರಡು ದೊಡ್ಡ ಭಾಗಗಳಲ್ಲಿ ವಿಭಾಗವಾಗಿರುವದೆಂದು ನೀವು ತಿಳಿದಿರುವಿರೋ? ಅವು ಯಾವವು?

ಯಾವುದರಲ್ಲಿ ಹೆಚ್ಚು ವಿಷಯವಿರುವುದು, ಹಳೇ ಒಡಂಬಡಿಕೆಯಲ್ಲೋ ಇಲ್ಲವೇ ಹೊಸ ಒಡಂಬಡಿಕೆಲ್ಲಿಯೋ ಎಂಬುದನ್ನು ನೀವು ತಿಳಿದಿರುವಿರೋ? [ಯಾವುದರಲ್ಲಿ ಹೆಚ್ಚು ವಿಷಯವಿರುವುದೆಂಬುದನ್ನು ತೋರಿಸಲು, ಬೈಬಲನ್ನು ಹೊಸ ಒಡಂಬಡಿಕೆಯ ಪ್ರಾರಂಭದಲ್ಲಿ ತೆರೆದು, ಎರಡು ಒಡಂಬಡಿಕೆಗಳ ಮಧ್ಯದಲ್ಲಿಯ ಅಳತೆಯನ್ನು ಹೋಲಿಸಿ ತೋರಿಸಬಹುದು.]

ಬೈಬಲು ವಿವಿಧ ಗ್ರಂಥಕರ್ತರ ಬರಹಗಳ ಸಂಗ್ರಹವಾಗಿದೆ. ಇಡೀ ಬೈಬಲ್ 66 ಪುಸ್ತಕಗಳನ್ನು ಒಳಗೊಂಡಿರುತ್ತದೆ. ಹಳೇ ಒಡಂಬಡಿಕೆಯು 39 ಪುಸ್ತಕಗಳನ್ನೂ, ಹೊಸ ಒಡಂಬಡಿಕೆಯು 27 ಪುಸ್ತಕಗಳನ್ನು ಒಳಗೊಂಡಿರುತ್ತವೆ.

ಒಂದು ಪುಟದ 2 ಯೋಹಾನ ಪುಸ್ತಕದಂತೆ, ಅನೇಕ ಪುಟಗಳ ಕೀರ್ತನೆ ಗ್ರಂಥದಂತೆ, ಬೈಬಲಿನ ಪುಸ್ತಕಗಳು ಅಳತೆಯಲ್ಲಿ ಭಿನ್ನವಾಗಿವೆ. ಪ್ರತಿಯೊಂದು ಪುಸ್ತಕವು ವಚನಗಳಲ್ಲಿ ವಿಭಾಗಿಸಲ್ಪಟ್ಟಿರುತ್ತದೆ.

ಹಳೇ ಒಡಂಬಡಿಕೆಯು 4 ಪ್ರಮುಖ ಭಾಗಗಳನ್ನು ಒಳಗೊಂಡಿರುತ್ತದೆ: 5 ಧರ್ಮಶಾಸ್ತ್ರದ ಪುಸ್ತಕಗಳು, 12 ಚರಿತ್ರೆಯ ಪುಸ್ತಕಗಳು, 5 ಜ್ಞಾನದ ಮತ್ತು ಆರಾಧನೆಯ ಪುಸ್ತಕಗಳು, ಮತ್ತು 17 ಪ್ರವಾದನೆಯ ಪುಸ್ತಕಗಳು ಇವು ಕೆಲವು ಸಲ 5 ಪ್ರಮುಖ ಪ್ರವಾದಿಗಳ ಪುಸ್ತಕಗಳು ಹಾಗೂ 12 ಚಿಕ್ಕ ಪ್ರವಾದಿಗಳ ಪುಸ್ತಕಗಳು ಎಂದು ವಿಭಾಗಿಸಲ್ಪಟ್ಟಿವೆ, ಪುಸ್ತಕಗಳಲ್ಲಿಯ ವಿಷಯಗಳ ಮೊತ್ತದ ಮೇಲೆ ಅವಲಂಭಿಸಿ ಹೀಗೆ ಕರೆಯಲ್ಪಟ್ಟಿವೆ. ಪ್ರಮುಖ ಪ್ರವಾದಿಗಳು ಚಿಕ್ಕ ಪ್ರವಾದಿಗಳಿಗಿಂತ ಹೆಚ್ಚಾದದ್ದನ್ನು ಬರೆದರು.

ಹೊಸ ಒಡಂಬಡಿಕೆಯೂ ಸಹ 4 ಪ್ರಮುಖ ಭಾಗಗಳನ್ನು ಒಳಗೊಂಡಿರುತ್ತದೆ: 4 ಪುಸ್ತಕಗಳು ಯೇಸುವಿನ ಜೀವನ ಮತ್ತು ಬೋಧನೆಯನ್ನು ಒಳಗೊಂಡಿವೆ, 1 ಚರಿತ್ರೆಯ ಪುಸ್ತಕ, 21 ಪತ್ರಿಕೆಗಳು (ಕೆಲವು ಸಲ 13 ಪೌಲನ ಪತ್ರಿಕೆಗಳು ಮತ್ತು 8 ಸಾಮಾನ್ಯ ಪತ್ರಿಕೆಗಳು ಎಂದು ವಿಭಾಗಿಸಲಪಟ್ಟಿವೆ), ಮತ್ತು 1 ಪ್ರವಾದನೆಯ ಪುಸ್ತಕ.

ಈ ಪಾಠದಲ್ಲಿ ಬೈಬಲಿನ ಆರಂಭದಿಂದ ಪ್ರಾರಂಭಿಸುತ್ತೇವೆ. ಹಾಗೂ "ಪಾಪ ಮತ್ತು ಮರಣದ ಮೂಲವು ಯಾವುದು?" ಎಂಬ ಅಧ್ಯಯನ ಪ್ರಶ್ನಾವಳಿಯನ್ನು ಯೋಚಿಸುವದರಿಂದ ಸೃಷ್ಟಿಯೊಂದಿಗೆ ಪ್ರಾರಂಭಿಸುತ್ತೇವೆ [ಪುಟ 119ನ್ನು ನೋಡಿರಿ.]

## I. ಸೃಷ್ಟಿ

1. ಸೃಷ್ಟಿಯಲ್ಲಿ ಯಾವುದು ಒಳಗೊಂಡಿತ್ತು? ಆದಿಯಲ್ಲಿ ದೇವರು ಏನನ್ನು ಸೃಷ್ಟಿಸಿದನು? [ಕಲಿಯುವವನು ಆದಿಕಾಂಡ 1:1ನ್ನು ಓದಲಿ.] ದೇವರು *ಏನನ್ನು* ಸೃಷ್ಟಿಸಿದನು? [ಅವನು ಉತ್ತರ ಕೊಡಲಿಕ್ಕೆ, ಖಾಲಿಯಿರುವ ಸ್ಥಳಗಳನ್ನು "ಆಕಾಶವನ್ನೂ" ಮತ್ತು "ಭೂಮಿಯನ್ನೂ" ಎಂಬ ಪದಗಳಿಂದ ತುಂಬಲಿ.]

2. ತಾನು ಸೃಷ್ಟಿಸಿದ್ದರ ಬಗ್ಗೆ ದೇವರು ಏನನ್ನು ನೋಡಿದನು? [ಅವನು ಆದಿಕಾಂಡ 1:31 ಓದಲಿ.] ದೇವರ ಸೃಷ್ಟಿಯು *ಏನಾಗಿತ್ತು?* [ಅವನು ಉತ್ತರಕೊಡಲಿ. "ಒಳ್ಳೇಯದಾಗಿತ್ತು" ಎಂಬುದನ್ನು ಖಾಲಿಯಾದ ಸ್ಥಳದಲ್ಲಿ ತುಂಬಲಿ.]

ದೇವರು ಸೃಷ್ಟಿಸದೇ ಇರುವಂಥ ಯಾವುದಾದರೂ ಅಸ್ತಿತ್ವದಲ್ಲಿ ಇತ್ತೋ? ದೇವರು ಸೃಷ್ಟಿಸಿದ ಪ್ರತಿಯೊಂದೂ ಒಳ್ಳೇಯದಾಗಿತ್ತೋ? ದೇವರು ಪ್ರತಿಯೊಂದನ್ನೂ

ಒಳ್ಳೇಯದಾಗಿ ಸೃಷ್ಟಿಸಿದ್ದರೆ, ಈಗ ಪ್ರತಿಯೊಂದು ಯಾಕೆ ಒಳ್ಳೇಯದಾಗಿರುವದಿಲ್ಲ? ಈ ಅಧ್ಯಾಯನದಲ್ಲಿ ಅನಂತರದಲ್ಲಿ ಇದನ್ನೇ ನಾವು ಪರೀಕ್ಷಿಸುತ್ತೇವೆ.

## II. ಏದೆನ್ ತೋಟದಲ್ಲಿ

1. ಈಗ ನಾವು ಏದೆನ್ ತೋಟವನ್ನು ವಿಚಾರಿಸಲಿಕ್ಕಿದ್ದೇವೆ. ಏದೆನ್ ತೋಟದ ಮಧ್ಯದಲ್ಲಿ *ಏನು* ಇತ್ತು? [ಕಲಿಯುವವನು ಆದಿಕಾಂಡ 2:9 ಓದಲಿ.] ತೋಟದ ಮಧ್ಯದಲ್ಲಿ ಎರಡು ಮರಗಳು ಇದ್ದವ್ರೋ? ತೋಟದ ಮಧ್ಯದಲ್ಲಿಯ ಎರಡು ಮರಗಳಿಗೆ *ಯಾವ ಹೆಸರುಗಳು* ಕೊಡಲ್ಪಟ್ಟಿದ್ದವು? [ಖಾಲಿಯಾದ ಸ್ಥಳಗಳಲ್ಲಿ "ಜೀವ" ಮತ್ತು "ಒಳ್ಳೇದರ" ಹಾಗೂ "ಕೆಟ್ಟದ್ದರ" ಎಂಬ ಪದಗಳನ್ನು ತುಂಬಿರಿ.]

[ಈ ಅಧ್ಯಯನ ಪ್ರಶ್ನಾವಳಿಯನ್ನು ತಿರುಗಿಸಿರಿ, ಮತ್ತು *ಹಿಂದೆ* ಎರಡು ಮರಗಳನ್ನು ಚಿತ್ರಿಸಿರಿ, ಹಾಗೂ ಅವುಗಳಿಗೆ "ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹು" ಹಾಗೂ "ಜೀವ" ಎಂದು ಹೆಸರು ಬರೆಯಿರಿ. ನಿಮ್ಮ ಚಿತ್ರ ಹೇಗೆ ಕಾಣಿಸುತ್ತದೆ ಎಂಬ ವಿಚಾರ ಪಡೆಯಲು ಚಿತ್ರವನ್ನು ಗಮನಿಸಿರಿ. ಎರಡು ಮರಗಳನ್ನೂ ಮಾತ್ರ *ಚಿತ್ರಿಸಿರಿ,* ಹಾಗೂ ದೊಡ್ಡ ತಲೆಗಳೊಂದಿಗೆ ಆದರೆ ಪ್ರತಿಯೊಂದು ಕಣ್ಣಿಗಾಗಿ ಒಂದೊಂದೆ ಗೆರೆಯೊಂದಿಗೆ ಆದಾಮ ಮತ್ತು ಹವ್ವಳಿಗಾಗಿ ರೇಖಾ ಚಿತ್ರ ಬಿಡಿಸಿರಿ. ಪ್ರಶ್ನಾವಳಿಯ ಹಿಂದಿನ ಪುಟದ ಮೇಲೆ ಹೆಚ್ಚು ಚಿತ್ರಿಸಲು ಪಾಠದಲ್ಲಿ ಸೂಚಿಸುವ ವಿಷಯಕ್ಕೆ ಬರುವವರೆಗೆ ಕಾದುಕೊಂಡಿರ್ರಿ.]

ಬೈಬಲಿನಲ್ಲಿ ಹೆಸರುಗಳಿಗೆ ವಿಶೇಷ ಅರ್ಥವಿದೆ. "ಜೀವೃಕ್ಷ" ಮತ್ತು "ಒಳ್ಳೇಯದರ ಹಾಗೂ ಕೆಟ್ಟದ್ದರ ಅರುಹನ್ನುಂಟುಮಾಡುವ ವೃಕ್ಷ" ಎಂದು ಅವು ಯಾಕೆ ಕರೆಯಲ್ಪಟ್ಟವು ಎಂದು ನೀವು ಯೋಚಿಸುತ್ತೀರಿ? ಆದಾಮ ಮತ್ತು ಹವ್ವರ ನಿಮಿತ್ತವಾಗಿ ಮರಗಳಿಗೆ ಹೆಸರುಗಳಿದ್ದವು, ಅವರು ತಿಂದರೆ ಮರಗಳಿಂದ ಹೆಸರಿಟ್ಟಂತೆ, ಅಂದರೆ, "ಜೀವವನ್ನು" ಮತ್ತು "ಒಳ್ಳೇಯದರ ಹಾಗೂ ಕೆಟ್ಟದ್ದರ ಅರುಹನ್ನು" ಹೊಂದುಕೊಳ್ಳುವದನ್ನು ಸೂಚಿಸುವದಕ್ಕಾಗಿದ್ದವೆಂದು ಯೋಚಿಸುತ್ತೀರೋ?

2. ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹನ್ನುಂಟುಮಾಡುವ ಮರದ ಹಣ್ಣನ್ನು ತಿಂದರೆ ಅವರಿಗೆ ಏನಾಗುವುದೆಂದು ದೇವರು ಹೇಳಿದ್ದನು? [ಅವನು ಆದಿಕಾಂಡ 2:17 ಓದಲಿ.] ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹನ್ನುಂಟು ಮಾಡುವ ಮರದ ಹಣ್ಣನ್ನು ತಿಂದರೆ, ಅವರಿಗೆ *ಏನಾಗುವುದು?* [ಖಾಲಿಯಾದ ಸ್ಥಳದಲ್ಲಿ "ಸಾಯುವರು" ಎಂದು ತುಂಬಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ನಾವು ಮಾಡುವದಕ್ಕೆ ದೇವರು ಲೆಕ್ಕಾಕೇಳುತ್ತಾನೆ ಎಂಬುದನ್ನು ಕಲಿತುಕೊಂಡಿದ್ದೇವೆ, ನಾವು ಮಾಡುವಂಥ ಪ್ರತಿಯೊಂದೂ ಒಂದಿಲ್ಲಾ ಒಂದು ರೀತಿಯಲ್ಲಿ, ದೈಹಿಕವಾಗಿಯಾಗಲೀ, ಮಾನಸಿಕ ವಾಗಿಯಾಗಲೀ, ಬೌದ್ಧಿಕವಾಗಿಯಾಗಲೀ, ಸಾಮಾಜಿಕವಾಗಿಯಾಗಲೀ, ನೈತಿಕ ವಾಗಿಯಾಗಲೀ, ಇಲ್ಲವೇ ಆತ್ಮಿಕವಾಗಿಯಾಗಲೀ ನಮ್ಮ ಮೇಲೆ ಪರಿಣಾಮ ಮಾಡುತ್ತದೆ. ಮರಗಳ ಹಣ್ಣನ್ನು ತಿನ್ನುವುದು ಅವರ ಜೀವಿತಗಳ ಮೇಲೆ ಪರಿಣಾಮ ಮಾಡುವುದು.

## III. ಶೋಧನೆ

1. ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹನ್ನುಂಟು ಮಾಡುವ ಮರದ ಹಣ್ಣನ್ನು ತಿನ್ನಲು ಹವ್ವಳ ಶೋಧನೆಯನ್ನು ಈಗ ನಾವು ವಿಚಾರಿಸುತ್ತೇವೆ. ಸರ್ಪವು ಆಕೆಯನ್ನು

ಹೇಗೆ ಶೋಧಿಸಿತು? [ಕಲಿಯುವವನು ಆದಿಕಾಂಡ 3:1ನ್ನು ಓದಲಿ.] ಆಕೆಯನ್ನು ಶೋಧಿಸಲು ಅದು *ಏನು* ಹೇಳಿತು? [ಖಾಲಿಯಿರುವ ಸ್ಥಳದಲ್ಲಿ "ತಿನ್ನು" ಎಂದು ತುಂಬಿರಿ.] ಇದು ಹವ್ವಳು ಶೋಧಿಸಲ್ಪಡುವದಕ್ಕೆ ಯಾಕೆ ಕಾರಣವಾಯಿತು? ದೇವರು ಹೇಳಿದ್ದನ್ನು ಪ್ರಶ್ನಿಸಲಿಕ್ಕೆ ಹವ್ವಳಿಗೆ ಇದು ಕಾರಣವಾದದ್ದರ ನಿಮಿತ್ತವಾಗಿರಬಹುದೋ?

2. ಮರದ ಹಣ್ಣನ್ನು ತಿಂದರೆ ತಾನು ಸಾಯಬಹುದೆಂದು ಹವ್ವಳು ತಿಳಿದಿದ್ದಳೋ? [ಅವನು ಆದಿಕಾಂಡ 3:3 ಓದಲಿ.] ಮರದ ಹಣ್ಣನ್ನು ತಿಂದರೆ *ಏನಾಗುವದೆಂದು* ದೇವರು ಹೇಳಿದ್ದಾನೆಂದು ಆಕೆ ಹೇಳಿದಳು? [ಖಾಲಿಯಾದ ಸ್ಥಳದಲ್ಲಿ "ಸಾಯುವಿರಿ" ಎಂಬುದನ್ನು ಸೇರಿಸಿರಿ.]

3. ಸರ್ಪದ ಉತ್ತರವು ಏನಾಗಿತ್ತು? [ಅವನು ಆದಿಕಾಂಡ 3:4, 5 ಓದಲಿ.] *ಯಾವ* ಒಂದು ಸಂಗತಿಯು *ಸಂಭವಿಸುವದಿಲ್ಲ* ಮತ್ತು *ಯಾವ* ಎರಡು ಸಂಗತಿಗಳು *ಸಂಭವಿಸುವವು?* ಎಂದು ಸರ್ಪವು ಹೇಳಿತು [ಖಾಲಿಯಾದ ಸ್ಥಳದಲ್ಲಿ a. "ನೀವು ನಿಶ್ಚಯವಾಗಿ ಸಾಯುವದಿಲ್ಲ"; ಮತ್ತು b. "ನಿಮ್ಮ ಕಣ್ಣುಗಳು ತೆರೆಯಲ್ಪಡುವವು"; ಮತ್ತು c. "ನೀವು ಒಳ್ಳೆಯದನ್ನು ಮತ್ತು ಕೆಟ್ಟದ್ದನ್ನು ತಿಳಿದುಕೊಳ್ಳುವಿರಿ" ಎಂದು ತುಂಬಿರಿ.]

ಸರ್ಪವು ಮಾಡಿದ ಈ ಮೂರು ಹೇಳಿಕೆಗಳಲ್ಲಿ ಯಾವುದು ಸತ್ಯವಾಗಿದೆ ಮತ್ತು ಯಾವುದು ಸುಳ್ಳಾಗಿವೆ? ಅವರು ಸತ್ತು ಹೋಗುವರೋ? ಅವರು ಸತ್ತು ಹೋಗುವರು ಎಂದು ದೇವರು ಹೇಳಿದ್ದನ್ನು ನಾವು ಆಗಲೇ ಕಲಿತುಕೊಂಡಿದ್ದೇವೆ. ಆದುದರಿಂದ ಇದು ಸತ್ಯವಾದ ಹೇಳಿಕೆಯಾಗಿದೆ. ಆದರೆ ಅವರ ಕಣ್ಣುಗಳು ತೆರೆಯಲ್ಪಡುವವು ಮತ್ತು ಒಳ್ಳೇದನ್ನು ಹಾಗೂ ಕೆಟ್ಟದ್ದನ್ನು ತಿಳಿದು ಕೊಂಡು ಅವರು ದೇವರಂತಾಗುವರು ಎಂಬ ಹೇಳಿಕೆಗಳ ಬಗ್ಗೆ ಏನು? ಈ ಎರಡು ಹೇಳಿಕೆಗಳು ಸತ್ಯವಾಗಿರುವವೋ ಇಲ್ಲವೇ ಸುಳ್ಳಾಗಿರುವವೋ? ಅವುಗಳ ಬಗ್ಗೆ ಮುಂದೆ ಈ ಪಾಠದಲ್ಲಿ ನಾವು ಕಲಿತುಕೊಳ್ಳುತ್ತೇವೆ.

4. ಹಣ್ಣನ್ನು ಕುರಿತು ಹವ್ವಳು ಏನನ್ನು ನೋಡಿದಳು? [ಅವನು ಆದಿಕಾಂಡ 3:6 ಓದಲಿ.] ಮರದ ಹಣ್ಣನ್ನು ಕುರಿತು ಹವ್ವಳು *ಯಾವ* ಮೂರು ಸಂಗತಿಗಳನ್ನು ನೋಡಿದಳು? [ಖಾಲಿಯಾದ ಸ್ಥಳದಲ್ಲಿ ಇದನ್ನು ತುಂಬಿರಿ. a. "ತಿನ್ನುವದಕ್ಕೆ ಉತ್ತಮವಾದದ್ದು"; b. "ನೋಡುವದಕ್ಕೆ ರಮ್ಯವಾದದ್ದು"; ಮತ್ತು c. "ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದು."] ಮರದ ಹಣ್ಣಿನ ಬಗ್ಗೆ ಯಾವುದು ಒಳ್ಳೇಯದು ಇಲ್ಲವೇ ಯಾವುದು ಕೆಟ್ಟದ್ದು ಎಂಬುದರ ಮೇಲೆ ಹವ್ವಳು ಕೇಂದ್ರೀಕರಿಸಿದ್ದಳೋ? ಮರದ ಕೆಟ್ಟ ಪರಿಣಾಮದ ಮೇಲೆ ಗಮನಿಸುವಲ್ಲಿ ಸೋತು ಹೋದದ್ದು ಮೋಸಪಡಿಸಲ್ಪಡಲಿಕ್ಕೆ ಆಕೆಗೆ ಕಾರಣವಾಯಿತೋ?

ಮರದ ಹಣ್ಣನ್ನು ಕುರಿತು ಹವ್ವಳಿಗೆ ಆಕರ್ಷಣೆ ಮಾಡಿದ್ದು 1 ಯೋಹಾನ 2:16ರಲ್ಲಿ ಹೇಳಿದ ಲೋಕದ ಸಂಗತಿಗಳು. ನಾವು ಆಕೆಯೊಂದಿಗೆ ಅನ್ವಯಿಸಿಕೊಳ್ಳಬಹುದು, ಯಾಕಂದರೆ ನಾವು ಲೋಕದ ಅದೇ ಸಂಗತಿಗಳಿಂದ ನಾವು ಶೋಧಿಸಲ್ಪಟ್ಟಿದ್ದೇವೆ.

ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹನ್ನುಂಟು ಮಾಡುವ ಮರದ ಹಣ್ಣನ್ನು ತಿಂದರೆ ತಾನು ಸಾಯುವೆನೆಂದು ಹವ್ವಳಿಗೆ ತಿಳಿದಿದ್ದರೂ, ಆಕೆ ಮರದ ಹಣ್ಣನ್ನು ತಿಂದಳು. ನಾವು ಮಾಡುತ್ತಿರುವುದು ಪಾಪವೆಂದು ತಿಳಿದಿದ್ದರೂ ತಪ್ಪಾದ ಅನೇಕ ಸಂಗತಿಗಳನ್ನು ನಾವೂ ಸಹ ಮಾಡುತ್ತೇವೆ, ಬಹುಶಃ ಈ ಕಾರಣದಿಂದ ಹವ್ವಳು ಮಾಡಿದ್ದಕ್ಕಾಗಿ ನಾವು ಬಹಳ ದಯೆಯಿಲ್ಲದವರಾಗಿರಬಾರದು.

## IV. ಪರಿಣಾಮಗಳು

1. ಈಗ ನಾವು ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನುಂಟುಮಾಡುವ ಮರದ ಹಣ್ಣನ್ನು ತಿನ್ನುವದರಿಂದ ಆಗುವ ಪರಿಣಾಮಗಳನ್ನು ಯೋಚಿಸುತ್ತೇವೆ. ಆದಾಮ

ಮತ್ತು ಹವ್ವರ ಕಣ್ಣುಗಳಿಗೆ ಏನಾಯಿತು? [ಅವನು ಆದಿಕಾಂಡ 3:7 ಓದಲಿ.] ಅವರ ಕಣ್ಣುಗಳು *ಏನಾದವು?* [ಖಾಲಿಯಾದ ಸ್ಥಳದಲ್ಲಿ "ತೆರೆಯಲ್ಪಟ್ಟವು" ಎಂದು ತುಂಬಿರಿ. *ಹಿಂಬದಿಯಲ್ಲಿ* ಆದಾಮ ಮತ್ತು ಹವ್ವರಿಗಾಗಿ ತೆರೆದ ಕಣ್ಣುಗಳನ್ನು *ಚಿತ್ರಿಸಿರಿ.* ಪುಟ 120ನ್ನು ನೋಡಿರಿ.]

ಇದರ ಅರ್ಥ ಅವರು ತೋಟದಲ್ಲಿ ಕಣ್ಣು ಮುಚ್ಚಿಕೊಂಡು ನಡೆಯುತ್ತಿದ್ದರು ಎಂದಾಗುವುದೋ? ನೀತಿಕಥೆಗೆ, ಅಂದರೆ, ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹಿಗೆ ಅವರ ಕಣ್ಣುಗಳು ಮುಚ್ಚಿಕೊಂಡಿದ್ದವು, ಮತ್ತು ಮರದ ಹಣ್ಣನ್ನು ತಿನ್ನುವುದು ಅವರ ಕಣ್ಣುಗಳನ್ನು ಒಳ್ಳೇಯದಕ್ಕೂ ಕೆಟ್ಟದಕ್ಕೂ ತೆರೆದವು ಎಂದು ಅರ್ಥವಾಗುತ್ತದಲ್ಲವೇ. ಮರದ ಹಣ್ಣನ್ನು ಅವರು ತಿನ್ನುವ ಮೊದಲು, ಒಳ್ಳೇಯದರ ಮತ್ತು ಕೆಟ್ಟದ್ದರ ಬಗ್ಗೆ ಅವರು ಚಿಂತಿಸ ಬೇಕಾಗಿದ್ದಿಲ್ಲ, ಯಾಕಂದರೆ ಅವರಿಗೆ ಒಳ್ಳೇಯದರ ಮತ್ತು ಕೆಟ್ಟದ್ದರ ಜ್ಞಾನವಿರಲಿಲ್ಲ, ಆದರೆ ಅವರ ಕಣ್ಣುಗಳು ತೆರೆಯಲ್ಪಟ್ಟಾಗ, ತಾವು ಬೆತ್ತಲೆಯಾಗಿದ್ದೇವೆಂಬ ತಿಳುವಳಿಕೆಗೆ ಬಂದರು. ಅವರು ನೈತಿಕ ಅರುಹನ್ನು ಹೊಂದಿದರು.

2. ಸರ್ಪವು ಹೇಗೆ ಶಿಕ್ಷಿಸಲ್ಪಟ್ಟಿತು? [ಓದಿರಿ ಆದಿಕಾಂಡ 3:14.] ಇಂದಿನಿಂದ ಮುಂದೆ ಅದು *ಯಾವುದರ* ಮೇಲೆ ಹರಿದಾಡುವುದು? [ಖಾಲಿಯಾದ ಸ್ಥಳದಲ್ಲಿ "ಹೊಟ್ಟೆ" ಎಂದು ತುಂಬಿರಿ.]

3. ಸ್ತ್ರೀಯು ಹೇಗೆ ದಂಡಿಸಲ್ಪಟ್ಟಳು? [ಓದಿರಿ ಆದಿಕಾಂಡ 3:16.] ಹೆರಿಗೆಯ ಸಮಯದಲ್ಲಿ *ಏನು* ಹೆಚ್ಚಾಗುವುದು, ಮತ್ತು ಆಕೆಯ ಮೇಲೆ ಪುರುಷನಿಗೆ *ಯಾವ* ಅಧಿಕಾರವಿರುವುದು? [ಖಾಲಿಯಾದ ಸ್ಥಳದಲ್ಲಿ "ನೋವು" ಮತ್ತು "ಆಳುವುದು" ಎಂದು ತುಂಬಿರಿ.]

4. ಭೂಮಿಗೆ ದೇವರು *ಏನು* ಮಾಡಿದನು? [ಓದಿರಿ ಆದಿಕಾಂಡ 3:17, ಮತ್ತು ಖಾಲಿಯಾದ ಸ್ಥಳದಲ್ಲಿ "ಶಪಿಸಲ್ಪಟ್ಟಿತು" ಎಂದು ತುಂಬಿರಿ.] ಮತ್ತು ಬೇರೆ ಯಾವ ಶಿಕ್ಷೆಯನ್ನು ದೇವರು ಆದಾಮನಿಗೆ ಕೊಟ್ಟನು? [ಓದಿರಿ ಆದಿಕಾಂಡ 3:19.] ಆದಾಮನು ಯಾವುದಕ್ಕೆ ಹಿಂದಿರುಗುವನು? [ಖಾಲಿಯಾದ ಸ್ಥಳದಲ್ಲಿ "ಮಣ್ಣಿಗೆ" ಎಂದು ತುಂಬಿರಿ.]

5. ಮರದ ಹಣ್ಣನ್ನು ತಿಂದದ್ದು ಆದಾಮ ಮತ್ತು ಹವ್ವರ ಸ್ವಭಾವವನ್ನು ಕೆಡಿಸಿತೋ? [ಓದಿರಿ ಆದಿಕಾಂಡ 3:22.] ಮನುಷ್ಯನು ಯಾರಂತೆ ಆಗಿರುವನು ಎಂದು ದೇವರು ಹೇಳಿದನು? [ಖಾಲಿಯಾದ ಸ್ಥಳದಲ್ಲಿ "ನಮ್ಮಂತೆ" ಎಂದು ತುಂಬಿರಿ.] ಯಾವ ರೀತಿಯಲ್ಲಿ ಮನುಷ್ಯನು ದೇವರಂತಾದನು? ಅವನು *ಏನನ್ನು* ತಿಳಿದುಕೊಂಡನು? [ಖಾಲಿಯಾದ ಸ್ಥಳದಲ್ಲಿ "ಒಳ್ಳೇಯದು" ಮತ್ತು "ಕೆಟ್ಟದ್ದು" ಎಂದು ತುಂಬಿರಿ. *ಹಿಂಬದಿಯಲ್ಲಿ* ಆದಾಮ ಮತ್ತು ಹವ್ವರ ಕೆಳಗೆ, "ಕಣ್ಣುಗಳು ತೆರೆಯಲ್ಪಟ್ಟವು ದೇವರಂತೆ ಒಳ್ಳೇಯದನ್ನು ಮತ್ತು ಕೆಟ್ಟದ್ದನ್ನು ತಿಳಿದುಕೊಂಡರು" ಎಂದು ಬರೆಯಿರಿ. ಪುಟ 120ನ್ನು ನೋಡಿರಿ.]

ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹನ್ನು ಹೊಂದಿಕೊಳ್ಳುವುದು ಆದಾಮ ಮತ್ತು ಹವ್ವರು ಕೆಟ್ಟು ಹೋದರು ಎಂದರ್ಥವಾದರೆ, ಆಗ ದೇವರಿಗೆ ಕೆಟ್ಟು ಹೋದ ಸ್ವಭಾವವು ಇರುವುದು ಯಾಕಂದರೆ ಆತನಿಗೆ ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹು ಇರುವುದು ಎಂದರ್ಥವಾಗುವದಲ್ಲವೇ.

ಒಳ್ಳೇಯದರ ಮತ್ತು ಕೆಟ್ಟದ್ದರ ತಿಳುವಳಿಕೆ ಹೊಂದಿಕೊಂಡಿರುವುದು ಒಳ್ಳೇಯದರ ಮತ್ತು ಕೆಟ್ಟದ್ದರ ಮಧ್ಯದಲ್ಲಿ ಭಿನ್ನತೆ ನೋಡುವ ಸಾಮರ್ಥ್ಯ ಒಳಗೊಂಡಿರಬೇಕು, ಈ ಜ್ಞಾನದ ಅರ್ಥವು ಮಾನವ ಕುಲವು ನೈತಿಕ ಆಯ್ಕೆಗಳನ್ನು ಮಾಡುವ ಸಮಸ್ಯೆಗಳೊಂದಿಗೆ

ಈಗ ಎದುರಿಸತಕ್ಕದ್ದು ಎಂದಾಗುತ್ತದೆ.

ಮಾನವ ಕುಲವು ಈಗ ಕೆಟ್ಟದ್ದನ್ನು ಮಾಡಲು ಶೋಧಿಸಲ್ಪಡಬಹುದು. ಇದಕ್ಕಿಂತ ಮೊದಲು, ಅವರು ನೈತಿಕ ತೀರ್ಮಾನಗಳ ಬಗ್ಗೆ ಸಂಬಂಧಿಸಿರಬೇಕಾಗಿದ್ದಿಲ್ಲ ಯಾಕಂದರೆ ಅವರಿಗೆ ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹು ಇರಲಿಲ್ಲ. ಅವರು ಈಗ ತಪ್ಪಾದ ಆಯ್ಕೆಗಳನ್ನು ಮಾಡಬಹುದು ಮತ್ತು ಅಂಥ ತಪ್ಪಾದ ಆಯ್ಕೆಗಳು ಪಾಪಭರಿತ ಆಯ್ಕೆಗಳಾಗಬಹುದು. ಅವರು ತಿನ್ನುವದಕ್ಕಿಂತ ಮೊದಲು, ಅವರಿಗೆ ಒಳ್ಳೇಯದರ ಮತ್ತು ಕೆಟ್ಟದ್ದರ ತಿಳುವಳಿಕೆಯಿರಲಿಲ್ಲ ಮತ್ತು ಈ ಕಾರಣದಿಂದ ಪಾಪಭರಿತ ಆಯ್ಕೆಗಳನ್ನು ಮಾಡಲಾರದವರಾಗಿದ್ದರು.

## V. **ಮಕ್ಕಳು ಒಳ್ಳೇಯದನ್ನು ಮತ್ತು ಕೆಟ್ಟದ್ದನ್ನು ತಿಳಿದಿರುವರೋ?**

1. ಮಕ್ಕಳು ಈ ಲೋಕದೊಳಗೆ ಜನಿಸುವಾಗ, ಅವು ಒಳ್ಳೇಯದನ್ನು ಮತ್ತು ಕೆಟ್ಟದ್ದನ್ನು *ತಿಳಿದುಕೊಂಡಿರುವವೋ?* [ಓದಿರಿ ಧರ್ಮೋಪದೇಶಕಾಂಡ 1:39. ಖಾಲಿಯಾದ ಸ್ಥಳದಲ್ಲಿ "ಇಲ್ಲ" ಎಂದು ತುಂಬಿರಿ.]

2. ಒಳ್ಳೇಯದರ ಮತ್ತು ಕೆಟ್ಟದ್ದರ ಜ್ಞಾನ ಅವರಿಗೆ ಇಲ್ಲದಿರುವದರಿಂದ, ನೈತಿಕ ಆಯ್ಕೆಗಳನ್ನು ಹೇಗೆ ಮಾಡಬೇಕೆಂಬುದನ್ನು ತಿಳಿಯಲು ಅವರು ಶಕ್ತರಾಗಿರುವರೋ? [ಓದಿರಿ ಯೆಶಾಯ 7:16.] *ಹೇಗೆ* ಮಾಡಬೇಕೆಂಬುದನ್ನು ಅವರು ಯಾವುದನ್ನು ತಿಳಿದಿರುವದಿಲ್ಲ? [ಖಾಲಿಯಾದ ಸ್ಥಳದಲ್ಲಿ ಕೆಟ್ಟದ್ದನ್ನು "ನಿರಾಕರಿಸು" ಮತ್ತು ಒಳ್ಳೇದನ್ನು "ಆಯ್ದುಕೋ" ಎಂಬುದನ್ನು ತುಂಬಿರಿ.]

3. ಒಳ್ಳೇಯದರ ಮತ್ತು ಕೆಟ್ಟದ್ದರ ಮಧ್ಯದಲ್ಲಿ ಆಯ್ದುಕೊಳ್ಳಲು ಒಬ್ಬನು ಶಕ್ತನಾಗದಿದ್ದರೆ, ಅವನು ಪಾಪಮಾಡಲಿಕ್ಕೆ ಶಕ್ತನಾಗಿರುವನೋ? [ಓದಿರಿ ಯೋಹಾನ 9:41.] ಒಬ್ಬನು ಕುರುಡನಾಗಿದ್ದರೆ, ಅವನಿಗೆ *ಯಾವುದು* ಇರುವ*ದಿಲ್ಲ?* [ಖಾಲಿಯಾದ ಸ್ಥಳದಲ್ಲಿ "ಪಾಪ" ಎಂದು ತುಂಬಿರಿ.]

"ಕುರುಡ" ಎಂಬುದರಿಂದ ಯೇಸುವಿನ ಅರ್ಥವು ಯಾವುದು? ಆತನು ದೈಹಿಕ ಕುರುಡತನದ ಬಗ್ಗೆ ಮಾತಾಡುತ್ತಿರುವನೋ? "ಕುರುಡುತನ" ಎಂಬುದರಿಂದ ನೋಡಲು ಶಕ್ತಿ ಅಂದರೆ, ಅರ್ಥಮಾಡಿಕೊಳ್ಳುವದರ ಬಗ್ಗೆ ಆತನ ಅರ್ಥವಾಗುವದಿಲ್ಲವೇ? ಅರ್ಥಮಾಡಿಕೊಳ್ಳದವನು ಜವಾಬ್ದಾರನಲ್ಲ, ಮತ್ತು ಈ ಕಾರಣದಿಂದ ದೇವರಿಂದ ಒಬ್ಬ ಪಾಪಿಯೆಂದು ಎಣಿಸಲ್ಪಡುವದಿಲ್ಲ ಎಂದು ಯೇಸು ಬೋಧಿಸಲಿಲ್ಲವೇ? ಮಕ್ಕಳು ಇದೇ ತರಗತಿಯಲ್ಲಿ ಬರುವರಲ್ಲವೇ?

## VI. **ಮಕ್ಕಳು ಪಾಪಿಗಳಾಗಿ ಜನಿಸಿರುವರೋ?**

1. ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹು ಇಲ್ಲದವರು ಪಾಪಮಾಡಲಾರದವರು ಆಗಿದ್ದುದರಿಂದ, ತಮ್ಮ ತಂದೆತಾಯಿಗಳಿಂದ ಮಕ್ಕಳು ಪಾಪವನ್ನು ಸ್ವಾಸ್ತ್ಯವಾಗಿ ಪಡೆಯುವ ಮತ್ತು ಈ ಕಾರಣದಿಂದ ಲೋಕದೊಳಗೆ ಪಾಪಿಗಳಾಗಿ ಜನಿಸುವ ಸಾಧ್ಯತೆ ಇರುವುದೋ? ತಂದೆಯ ಪಾಪವನ್ನು ಮಗನು ಹೋರುವನೋ? [ಓದಿರಿ: ಯೆಹೆಜ್ಕೇಲ 18:20.] ಮಗನು *ಯಾರ* ಪಾಪವನ್ನು ಹೊತ್ತುಕೊಳ್ಳುವದಿಲ್ಲ? [ಖಾಲಿಯಾದ ಸ್ಥಳದಲ್ಲಿ "ತಂದೆಯ" ಎಂದು ತುಂಬಿರಿ.] ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತ ಪಾಪಗಳಿಗಾಗಿ ಲೆಕ್ಕಾ ಕೊಡಬೇಕು ಆದರೆ ತನ್ನ ತಂದೆತಾಯಿಗಳ ಪಾಪಗಳಿಗಾಗಿ ಅಲ್ಲ ಎಂದು ಈ ವಚನವು ಬೋಧಿಸುವದಿಲ್ಲವೋ?

*ಪರಿಣಾಮ* ಮತ್ತು *ಅಪರಾಧ* ಇವುಗಳ ಮಧ್ಯದಲ್ಲಿ ಭಿನ್ನತೆಯನ್ನು ಸ್ಪಷ್ಟವಾಗಿ

ತಿಳಿದುಕೊಳ್ಳಿರಿ. ಆದಾಮನ ಮತ್ತು ಹವ್ವಳ ಪಾಪದ ಪರಿಣಾಮವಾಗಿ ನಾವೆಲ್ಲರೂ ಸಾಯುವೆವು. ಇದು, ಹೀಗಿದ್ದರೂ ಅವರ ಪಾಪದ ನಿಮಿತ್ತವಾಗಿ ನಾವು ಪಾಪಿಗಳಾಗಿ ಎಣಿಸಲ್ಪಟ್ಟಿದ್ದೇವೆ ಹಾಗೂ ಪಾಪಿಗಳೆಂದು ತಿಳಿಯಲ್ಪಟ್ಟಿದ್ದೇವೆ ಎಂದು ಅರ್ಥವಾಗುವದಿಲ್ಲ. ಒಬ್ಬ ಮನುಷ್ಯನು ತನ್ನ ಮಕ್ಕಳನ್ನು ಕ್ರೂರವಾಗಿ ಸಾಯುವಂತೆ ಹೊಡೆದರೆ, ಅವರು ಅವನ ಪಾಪದ ಪರಿಣಾಮವನ್ನು ಅನುಭವಿಸುವರು, ಆದರೆ ಅವನ ಪಾಪದ ಕಾರಣದಿಂದ ಅಪರಾಧಿಗಳಾಗಿರುವ*ದಿಲ್ಲ*.

2. ಒಂದು ಮಗುವು ಯಾರಿಂದ ತನ್ನ ಆತ್ಮವನ್ನು ಪಡೆದುಕೊಳ್ಳುವುದು? [ಓದಿರಿ ಜೆಕರ್ಯ 12:1.] ಮನುಷ್ಯನೊಳಗೆ ದೇವರು *ಏನನ್ನು* ರೂಪಿಸಿದನು? [ಖಾಲಿಯಾದ ಸ್ಥಳದಲ್ಲಿ "ಆತ್ಮ" ಎಂದು ತುಂಬಿರಿ.] ಆತ್ಮಗಳ ತಂದೆಯು ಯಾರು? [ಓದಿರಿ ಇಬ್ರಿಯ 12:9.] ದೇವರು ಆತ್ಮಗಳಿಗೆ *ಏನು* ಆಗಿರುತ್ತಾನೆ? [ಖಾಲಿಯಾದ ಸ್ಥಳದಲ್ಲಿ "ತಂದೆ" ಎಂದು ತುಂಬಿರಿ.]

ದೇವರಿಂದ ನಮ್ಮ ಆತ್ಮವನ್ನು ನಾವು ಹೊಂದಿಕೊಳ್ಳುತ್ತೇವೆ (ಪ್ರಸಂಗಿ 12:7 ಸಹ ಯೋಚಿಸಿರಿ), ಅಂದರೆ ಪಾಪಭರಿತ ಆತ್ಮದೊಂದಿಗೆ ಲೋಕದೊಳಗೆ ನಾವು ಬರುವದಿಲ್ಲ ಎಂದು ಅರ್ಥವಾಗುತ್ತದೆ, ಯಾಕಂದರೆ ನಾವು ಹಾಗೆ ಮಾಡಿದರೆ, ಆಗ ದೇವರು ಕೆಡುಕಿನ ಮೂಲವಾಗಿರುವನು ಎಂದಾಗುತ್ತದೆ ಆದರೆ ಹಾಗಾಗುವುದು ಸಾಧ್ಯವಾಗುವದಿಲ್ಲ (ಯಾಕೋಬ 1:13).

3. ದೇವರ ರಾಜ್ಯಕ್ಕೆ ಯಾರು ಒಳಪಡುವರು? [ಓದಿರಿ ಮತ್ತಾಯ 19:14.] ಪರಲೋಕ ರಾಜ್ಯವು *ಯಾರಂತೆ* ಇರುವವರಾಗಿರುವುದು? [ಖಾಲಿಯಾದ ಸ್ಥಳದಲ್ಲಿ "ಚಿಕ್ಕ ಮಕ್ಕಳು" ಎಂದು ತುಂಬಿರಿ.] ಚಿಕ್ಕಮಕ್ಕಳು ಕೆಟ್ಟವರೂ ದುಷ್ಟರೂ, ಆಗಿದ್ದರೆ ಅವರಂತಿರುವವರಿಗೆ ಪರಲೋಕ ರಾಜ್ಯವು ಒಳಪಟ್ಟಿರುವದಿಲ್ಲ. ಆದರೆ ಚಿಕ್ಕಮಕ್ಕಳು ಶುದ್ಧರೂ, ದೀನರೂ, ಮತ್ತು ಯಾಥಾರ್ಥರೂ ಆಗಿದ್ದರೆ, ಆಗ ಪರಲೋಕ ರಾಜ್ಯವು ಅವರಂತಿರುವವರದಾಗಿರುತ್ತದೆ. ನಿಶ್ಚಯವಾಗಿಯೂ ಪರಲೋಕರಾಜ್ಯವು ಚಿಕ್ಕಮಕ್ಕಳಂತಿರುವವರದಾಗಿರುತ್ತದೆ. ಅಂದರೆ ಶುದ್ಧರೂ, ದೀನರೂ, ಮತ್ತು ಯಥಾರ್ಥರೂ ಆದವರಿಗಾಗಿರುತ್ತದೆ.

[ಅಧ್ಯಯನ *ಪ್ರಶ್ನಾವಳಿಯ ಹಿಂಬದಿಯಲ್ಲಿ* (ಪುಟ 120ನ್ನು ನೋಡಿರಿ) ನೋಡಿರಿ ಮಕ್ಕಳು ಪಾಪಿಗಳಾಗಿರುವರು ಈ ಕಾರಣದಿಂದ:

1. ಸ್ವಂತ ಕೃತ್ಯಗಳು? ________
2. ತಂದೆತಾಯಿಗಳು, ದೇಹದ ಮುಖಾಂತರ?________
3. ದೇವರು, ಆತ್ಮದ ಮುಖಾಂತರ?"________ ಎಂದು ಬರೆಯಿರಿ.

ಅವನು ಖಾಲಿಯಾದ ಸ್ಥಳದಲ್ಲಿ ತುಂಬಲಿ. ಪಾಠದಿಂದ ಈ ಎಲ್ಲಾ ಪ್ರಶ್ನೆಗಳಿಗೆ "ಇಲ್ಲ" ಎಂಬ ಉತ್ತರವನ್ನು ಕಲಿತು ಕೊಂಡಿರಬೇಕು.]

**ಸಾರಾಂಶ**

[ಪಾಠವನ್ನು ಸಾರಾಂಶಗೊಳಿಸುವದರಲ್ಲಿ, ಕಲಿಯುವವನು ಸರಿಯಾಗಿ ಉತ್ತರ ಕೊಡುವನೋ ಎಂಬುದನ್ನು ನೋಡುವದಕ್ಕಾಗಿ ಮುಖ್ಯ ತಲೆ ಬರಹಗಳ ಮೇಲೆ ಪ್ರಶ್ನೆಗಳನ್ನು ಕೇಳುವದರಿಂದ ಶಿಕ್ಷಕನು ಪಾಠದ ಹಿಂದಕ್ಕೆ ಪುನಃ ಹೋಗುವನು. ಶಿಕ್ಷಕನು ಪ್ರಶ್ನೆಗಳನ್ನು ಕೇಳುವನು ಮತ್ತು ವಿದ್ಯಾರ್ಥಿಯು ಅವುಗಳಿಗೆ ಉತ್ತರ ಕೊಡಲಿ.] ಈ ಪಾಠವನ್ನು ಸಾರಾಂಶಗೊಳಿಸಲು ಒಳ್ಳೇ ಮಾರ್ಗವು ಪಾಠದಲ್ಲಿಯ ಮುಖ್ಯ ಪ್ರಶ್ನೆಗಳಿಗೆ ಉತ್ತರ ಕೊಡುವುದಾಗಿದೆ.

I. *ಸೃಷ್ಟಿಯಲ್ಲಿ ಯಾವುದು ಒಳಗೊಂಡಿತ್ತು?* ಸರಿಯಾದ ಉತ್ತರವು "ಒಳ್ಳೇಯ ಆಕಾಶ ಮತ್ತು ಭೂಮಿ."

II. *ಏದೆನ್ ತೋಟದ ಮಧ್ಯದಲ್ಲಿ ಯಾವುದಿತ್ತು?* ಜೀವವೃಕ್ಷ ಮತ್ತು ಅವರು ತಿಂದರೆ ಮರಣವನ್ನು ತರುವ, ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹನ್ನುಂಟು ಮಾಡುವ ಮರ.

III. *ಏದೆನ್ ತೋಟದಲ್ಲಿ ಹವ್ವಳು ಹೇಗೆ ಶೋಧಿಸಲ್ಪಟ್ಟಳು?* ಆಕೆ ಸಾಯುವೆನೆಂದು ತಿಳಿದಿದ್ದರೂ, ಒಳ್ಳೇಯದರ ಮತ್ತು ಕೆಟ್ಟದ್ದರ ತಿಳುವಳಿಕೆಯ ಮರದ ಆಕರ್ಷಕ ಗುಣಗಳನ್ನು ಆಕೆ ಯೋಚಿಸುವಂತೆ ದೇವರನ್ನು ಪ್ರಶ್ನಿಸಲು ಸರ್ಪವು ಆಕೆಯನ್ನು ನಡಿಸಿತು, ಆಕೆ ತಿಂದರೆ, ಹವ್ವಳು ಸಾಯುವದನ್ನು, ಸರ್ಪವು ಅಲ್ಲಗಳೆಯಿತು ಮತ್ತು ಆಕೆಯು ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹನ್ನು ಹೊಂದಿ ದೇವರಂತಾಗುವಳು ಎಂದು ತೋರಿಸಿತು.

IV. *ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹನ್ನುಂಟು ಮಾಡುವ ಮರದ ಹಣ್ಣನ್ನು ತಿನ್ನುವದರಿಂದ ಯಾವ ಪರಿಣಾಮವಾಯಿತು?* ಸರ್ಪವು ತನ್ನ ಹೊಟ್ಟೆಯ ಮೇಲೆ ಹರಿದು ಹೋಗುವುದು, ಹೆರಿಗೆಯ ಸಮಯದಲ್ಲಿ ಸ್ತ್ರೀಗೆ ಹೆಚ್ಚಾದ ನೋವು ಇರುವುದು, ಮತ್ತು ಪುರುಷನು ಆಕೆಯ ಮೇಲೆ ಆಳಿಕೆ ನಡಿಸುವನು. ಭೂಮಿಯು ಶಾಪಗ್ರಸ್ತವಾಯಿತು. ಒಳ್ಳೇಯದನ್ನು ಮತ್ತು ಕೆಟ್ಟದ್ದನ್ನು ತಿಳಿದುಕೊಂಡು ಅವರು ದೇವರಂತೆ ಆಗಲು, ಅವರ ಕಣ್ಣುಗಳು ತೆರೆಯಲ್ಪಟ್ಟವು. ಅವರು ಭೂಮಿಗೆ ಹಿಂದಿರುಗುವರು, ಅಂದರೆ ಅವರು ಸತ್ತು ಹೋಗುವರು.

V. *ಒಳ್ಳೇಯದನ್ನು ಮತ್ತು ಕೆಟ್ಟದ್ದನ್ನು ತಿಳಿದುಕೊಂಡು ಮಕ್ಕಳು ಜಗತ್ತಿನಲ್ಲಿ ಜನಿಸುವರೋ?* ಒಳ್ಳೇಯದರ ಮತ್ತು ಕೆಟ್ಟದ್ದರ ತಿಳುವಳಿಕೆಯಿಲ್ಲದೇ ಮಕ್ಕಳು ಈ ಜಗತ್ತಿನಲ್ಲಿ ಜನಿಸುವವು, ಮತ್ತು ಈ ಕಾರಣದಿಂದ ಪಾಪವಿಲ್ಲದವರಾಗಿರುವರಲ್ಲವೇ?

VI. *ಮಕ್ಕಳು ಪಾಪಿಗಳಾಗಿ ಜನಿಸುವರೋ ಮತ್ತು ದೇವರ ರಾಜ್ಯದಿಂದ ಹೊರಗಿರುವರೋ?* ಮಗನು ತಂದೆಯ ಪಾಪದ ಅಪರಾಧವನ್ನು ಹೊರುವದಿಲ್ಲ, ಮತ್ತು ದೇವರು ಮನುಷ್ಯನಲ್ಲಿ ಮನುಷ್ಯನ ಆತ್ಮವನ್ನು ಇಡುವನು. ಆದುದರಿಂದ, ಮಗುವು ಶುದ್ಧವಾದ ಹಾಗೂ ಯಥಾರ್ಥವಾದ ಆತ್ಮದಿಂದ ಜನಿಸುವುದು. ಚಿಕ್ಕಮಕ್ಕಳಂತಿರುವವರಿಗೆ ಪರಲೋಕರಾಜ್ಯವು ಒಳಪಟ್ಟಿರುವುದು.

[ಶಿಕ್ಷಕನು ವಿದ್ಯಾರ್ಥಿಗೆ ಕೇಳಬಹುದು: ನೀನು ಶಿಶುವಾಗಿ ಬಾಪ್ತಿಸ್ಮ ಹೊಂದಿರುವಿಯೋ? ನೀನು ಯಾಕೆ ಬಾಪ್ತಿಸ್ಮ ಹೊಂದಿದಿ ಎಂಬುದನ್ನು ತಿಳಿದಿರುವಿಯೋ? ನೀನು ಜನಿಸಿದಾಗ ಒಬ್ಬ ಪಾಪಿಯಂತೆ ತಿಳಿದು ಖಂಡಿಸಲ್ಪಟ್ಟಿಯೋ?

ಶಿಶುವು ಪಾಪಿಯಾಗಿ ಜನಿಸಿದೆ ಎಂಬುದನ್ನು ಸಿದ್ಧಪಡಿಸಿ ತೋರಿಸಲು ಶಿಕ್ಷಕನು ಕೀರ್ತನೆ 51:5ನ್ನು ಯೋಚಿಸಬಹುದು. ನಾವು ಈ ಅಧ್ಯಯನದಲ್ಲಿ ಕಲಿತು ಕೊಂಡದ್ದಕ್ಕೆ ವಿರುದ್ಧವಾಗಿ ಮಕ್ಕಳು ಪಾಪಿಗಳಾಗಿದ್ದಾರೆಂಬುದನ್ನು ತೋರಿಸಲು ಈ ವಚನವನ್ನು ಉಪಯೋಗಿಸುತ್ತಾರೆ. NIV ಮತ್ತು NRSVಯಂಥ ಕೆಲವು ಭಾಷಾಂತರಗಳಿಂದ ಇಲ್ಲವೇ ಈ ವಚನವನ್ನು ತಪ್ಪಾಗಿ ಅನ್ವಯಿಸುವದರಿಂದ ಅವರು ಹೀಗೆ ಮಾಡುತ್ತಾರೆ. ಮೂಲಭಾಷೆಯು, ಹಿಬ್ರೂ ಭಾಷೆಯು, ಹೀಗೆ ಹೇಳುತ್ತದೆ, "ಇಗೋ, ಅನ್ಯಾಯದಲ್ಲಿ ನಾನು ತರಲ್ಪಟ್ಟೆನು, ಮತ್ತು ಪಾಪದಲ್ಲಿ ನನ್ನ ತಾಯಿ ನನ್ನನ್ನು ಗರ್ಭದಲ್ಲಿ ಧರಿಸಿದಳು."

ಈ ವಚನವು ದಾವೀದನು ತನ್ನನ್ನು ತಗ್ಗಿಸಿಕೊಳ್ಳುವಂತೆ ತೋರಿಸುತ್ತದೆ, ತಾನು ಜನಿಸಿದ ದುಷ್ಟ ಪರಿಸರಗಳಿಂದ ಪರಿಣಾಮಗೊಂಡ ತನ್ನ ಜೀವನದಲ್ಲಿಯ ಪರಿಪೂರ್ಣತೆಯಿಲ್ಲದವುಗಳ ಮೇಲೆ ಶೋಕ ವ್ಯಕ್ತಪಡಿಸುತ್ತಿದ್ದಾನೆ. ಇದು ಸತ್ಯವಾಗಿದ್ದರೆ,

ಅವನು ಸರಳವಾಗಿ ಹೀಗೆ ಹೇಳುತ್ತಿದ್ದಾನೆ, "ನಾನು ಜನಿಸಿದ ದುಷ್ಟ ವಾತಾವರಣದಿಂದ ಹಿಡಿಯಲ್ಪಟ್ಟಿದ್ದೇನೆ ಮತ್ತು ನನ್ನ ಅಸ್ತಿತ್ವದ ಪ್ರಾರಂಭದಿಂದ ನನ್ನ ಮೇಲೆ ಇದು ಪರಿಣಾಮಮಾಡಿದೆ."

ಜಗತ್ತಿನಲ್ಲಿ ಛಳಿಯಿಂದ ಕೂಡಿದ, ಹಿಮವಿರುವ ಜಗತ್ತಿನ ಭಾಗದಲ್ಲಿಯ ವ್ಯಕ್ತಿಯು ಛಳಿಯಿಂದ ಮತ್ತು ಹಿಮದಿಂದ ಕೂಡಿದ ದಿನ ಹೀಗೆ ಹೇಳುವದಕ್ಕೆ ಹೋಲಿಸಬಹುದು, "ಹಿಮ ಬಿರುಗಾಳಿಯಲ್ಲಿ ನನ್ನ ತಾಯಿ ನನ್ನನ್ನು ಗರ್ಭಧರಿಸಿದಳು, ಮತ್ತು ಹಿಮ ಬೀಳುತ್ತಿದ್ದ ಛಳಿಗಾಲದ ರಾತ್ರಿಯಲ್ಲಿ ನಾನು ಜನಿಸಿದೆನು. ಜಗತ್ತಿನ ಇಂಥ ಭಾಗದಲ್ಲಿ ನಾನು ವಾಸಿಸುತ್ತಿದ್ದುದು ಆಶ್ಚರ್ಯಕರವಾದದ್ದಲ್ಲ."

ಅವನು ಹಿಮ ಬಿರುಗಾಳಿಯಲ್ಲಿ ಜನಿಸಿದ್ದರಿಂದ ತಾನು ಹಿಮಕಣವಾಗಿ ಜನಿಸಿದೆನೆಂದು ಈ ಹೇಳಿಕೆಯ ಅರ್ಥವಾಗುವದಿಲ್ಲ. ಅದೇ ರೀತಿಯಲ್ಲಿ ದಾವೀದನು ತಾನು ಅಪರಾಧದಲ್ಲಿ ತರಲ್ಪಟ್ಟೆನು, ಪಾಪದಲ್ಲಿ ಹುಟ್ಟಿದೆನು ಎಂದು ಹೇಳಿದ್ದು. ತಾನು ಪಾಪಿಯಾಗಿ ಜನಿಸಿದೆನೆಂದು ತನ್ನ ಬಗ್ಗೆ ಯೋಚಿಸಿಕೊಂಡಂತೆ ಆಗಿರುವದಿಲ್ಲ. ಈ ಹೇಳಿಕೆಯು ಅವನ ಜನನದ ಸುತ್ತಲಿನ ಪರಿಸ್ಥಿತಿಯನ್ನು ಯೋಚಿಸುತ್ತದೆ ಆದರೆ ದಾವೀದನ ಜನನದ ನಂತರದ ಸ್ವಭಾವದ ಬಗ್ಗೆ ಯೋಚಿಸುವದಿಲ್ಲ. ಅವನು ಪಾಪಿಯಾಗಿ ಜನಿಸಿದನು ಎಂಬ ವಿಷಯವು ಈ ವಚನದಿಂದ ಅನ್ವಯಿಸಲ್ಪಡುವದಿಲ್ಲ.

ಆದಾಮ ಮತ್ತು ಹವ್ವರು ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹನ್ನುಂಟುಮಾಡುವ ಮರದ ಹಣ್ಣನ್ನು ತಿನ್ನಬಾರದೆಂದು ದೇವರು ಹೇಳಿದ್ದಕ್ಕೆ ಕಾರಣವನ್ನು ಸಾಧ್ಯವಾದಂತೆ ಶಿಕ್ಷಕನು ಹೇಳಬೇಕು. ಒಳ್ಳೇಯದರ ಮತ್ತು ಕೆಟ್ಟದ್ದರ ಅರುಹು ಹೊಂದುವದರಿಂದ ಪರಿಣಾಮವಾಗುವ ದುಃಖ, ಸಂಕಟ ಮತ್ತು ಅಪರಾಧದಿಂದ ಉಳಿಸುವದಕ್ಕಾಗಿತ್ತು. ಕೆಲವು ಸಲ ನಮಗೆ ಅಲ್ಪನಾಗಿರಲು ದೇವರು ಸಂಗತಿಗಳನ್ನು ಪ್ರತಿಬಂಧಿಸುತ್ತಾನೆಂದು ನಾವು ಯೋಚಿಸಬಹುದು, ಆದರೆ ದೇವರ ಎಲ್ಲಾ ಪ್ರತಿಬಂಧಗಳು ನಮ್ಮ ಒಳ್ಳೇಯದಕ್ಕಾಗಿರುತ್ತವೆ.

ಕಲಿಯುವವನು ಪಾಠವನ್ನು ಅರ್ಥಮಾಡಿಕೊಳ್ಳುವನೆಂಬ ನಿಶ್ಚಿತತೆ ಮಾಡಿಕೊಂಡ ತರುವಾಯ, ಮುಂದಿನ ಅಧ್ಯಯನಕ್ಕಾಗಿ ಸಮಯ ವ್ಯವಸ್ಥೆ ಮಾಡಿರಿ.]

© 2009 Truth for Today